# ಸ್ವಾಮಿ ಶಾರದಾನಂದರ ನೆನಪುಗಳು-೨

-ಸ್ವಾಮಿ ನಿಖಿಲಾನಂದ

ಅನುವಾದ: ಡಾ. ಇ. ವಸಂತಕುಮಾರ್

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ನನ್ನ ಆಧ್ಯಾತ್ಮಿಕ ಸಾಧನೆಯ ಪ್ರಮುಖ ಮಾರ್ಗ ಯಾವುದಾಗಿರಬೇಕು, ಸ್ವಾಮಿಜಿಯ ನಿರ್ದೇಶನದಂತೆ ಕೆಲಸವನ್ನು ಮಾಡಲೋ ಅಥವಾ ಧ್ಯಾನಜೀವನವನ್ನು ನಡೆಸಲೋ ಎಂದು ಅವರನ್ನು ಹಲವು ವರ್ಷಗಳ ನಂತರ ಸ್ವಾಮಿ ಶಾರದಾನಂದರನ್ನು ಕೇಳಿದೆ. ತಮ್ಮ ಶಿಷ್ಯರು ಮಾಡಬೇಕಾದ ನಿರ್ದಿಷ್ಟ ಆಧ್ಯಾತ್ಮಿಕ ಸಾಧನೆಯನ್ನು ಶ್ರೀರಾಮಕೃಷ್ಣರು ತಿಳಿಸುತ್ತಿದ್ದರು ಎಂದು ನಾನು ಅವರಿಗೆ ನೆನಪು ಮಾಡಿದೆ. ಕೆಲವು ನಿಮಿಷಗಳ ಕಾಲ ಅವರು ನನ್ನತ್ತ ನೋಡಿ, "ನೀನು ಸಂಪೂರ್ಣವಾಗಿ ಧ್ಯಾನಜೀವನವನ್ನು ನಡೆಸಬೇಕಾಗಿಲ್ಲವೆಂದು ಕಾಣುವುದು. ಕರ್ಮ ಮತ್ತು ಧ್ಯಾನವನ್ನು ಜೊತೆಗೂಡಿಸಿಕೊಂಡು ಹೋಗಲು ಪ್ರಯತ್ನಿಸು" ಎಂದರು.

ಅದೊಂದು ಚಳಿಯ ಹವೆಯಿದ್ದ ಮಧ್ಯಾಹ್ನ ತುಂತುರು ಮಳೆಯೂ ಬೀಳುತ್ತಿತ್ತು. ಸ್ವಾಮಿಗಳು ವಿಶ್ವನಾಥನ ದೇವಸ್ಥಾನಕ್ಕೆ ಹೋಗಿದ್ದರು. ನಾವು ತಂಗಿದ್ದ ಮನೆಯಲ್ಲಿ ನಾನೊಬ್ಬನೇ ಇದ್ದೆ. ಅದ್ವೈತ ಆಶ್ರಮದಿಂದ ಒಬ್ಬರು ಸ್ವಾಮಿಗಳು ನಮ್ಮಲ್ಲಿಗೆ ಬಂದು ನನಗೆ ಹೇಳಿದರು: "ಸ್ನಾನದ ಕೋಣೆಯಲ್ಲಿ ಒಂದು ಬಕೆಟ್ ಬಿಸಿ ನೀರು ಇಡಿ. ಸ್ವಾಮಿಗಳಿಗೆ ನರಗಳ ನೋವು ಸ್ವಲ್ಪ ಇದೆ. ಕೈಕಾಲುಗಳನ್ನು ಬೆಚ್ಚನೆಯ ನೀರಿನಿಂದ ತೊಳೆದುಕೊಂಡರೆ ಅವರಿಗೆ ಹಿತವಾಗುವುದು. ಮಹಾರಾಜ್ (ಸ್ವಾಮಿ ಬ್ರಹ್ಮಾನಂದರ) ಸೇವಕರು ಅವರಿಗಾಗಿ ಕೈಕಾಲು ತೊಳೆದುಕೊಳ್ಳಲು ಚಳಿಗಾಲದಲ್ಲಿ ಯಾವಾಗಲೂ ಬಿಸಿನೀರನ್ನು ಇಡುತ್ತಿದ್ದರು." ನಾನು ಒಂದು ಬಕೆಟ್ ಬಿಸಿನೀರನ್ನು ಸ್ನಾನದ ಮನೆಯಲ್ಲಿ ಇಟ್ಟೆ. ಸ್ವಾಮಿಗಳು ಹಿಂತಿರುಗಿದ ಮೇಲೆ ಬಿಸಿ ನೀರನ್ನು ಉಪಯೋಗಿಸಿದರು. ಈ ಸೇವೆಯಿಂದ ಅವರು ಖಂಡಿತವಾಗಿ ಸಂತೋಷಪಟ್ಟಿರಬೇಕು. ನೀರನ್ನು ಅಲ್ಲಿ ಯಾರು ಇಟ್ಟರೆಂದು ನಂತರ ಅವರು ಕೇಳಿದರು. ನಾನು ಇಟ್ಟಿದ್ದಾಗಿ ಹೇಳಿದೆ. ಅವರು ಅದಕ್ಕೆ ಕಾರಣವನ್ನು ಕೇಳಿದರು. ಅದು ಚಳಿಗಾಲದ ಸಂಜೆಯಾದುದರಿಂದ ಇಟ್ಟೆನೆಂದು ಹೇಳಿ. ಮತ್ತೆ ಮೂರ್ಖನಂತೆ, ಬ್ರಹ್ಮಾನಂದರ ಸೇವಕರೂ ಚಳಿಯ ದಿನಗಳಲ್ಲಿ ಅವರಿಗೆ ಹಾಗೆ ಇಡುತ್ತಿದ್ದರಂತೆ ಎಂದು ಸೇರಿಸಿದೆ. ಅವರಿಗೆ ಬಹಳ ಕೋಪ ಬಂದು ಹೇಳಿದರು: "ಬ್ರಹ್ಮಾನಂದರ ಮಟ್ಟಕ್ಕೆ ನನ್ನನ್ನೂ ಏರಿಸಬೇಕೆಂದಿರುವೆಯಾ?" ನನ್ನ ಮನಸ್ಸಿಗೆ ನೋವಾಗಿ ನನ್ನ ಕೋಣೆಯೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡೆ. ಬಾಗಿಲಿಗೆ ಬೆನ್ನು ಹಾಕಿ ಧ್ಯಾನ ಮಾಡುತ್ತಿರುವವನಂತೆ ಕುಳಿತುಕೊಂಡೆ. ಕೆಲವು ಕ್ಷಣಗಳಾದ ನಂತರ ಸ್ವಾಮಿಗಳು ಮೆಲ್ಲನೆ ಬಾಗಿಲನ್ನು ತೆರೆದು, ಮಧುರ ಧ್ವನಿಯಲ್ಲಿ, ತಮಗೆ ಒಂದು ಕಪ್ ಕಾಫಿ ತಯಾರಿಸಿಕೊಡಲು ಸಾಧ್ಯವೆ ಎಂದು ಕೇಳಿದರು. ನನ್ನ ಕೋಪವೆಲ್ಲ ಕರಗಿಹೋಯಿತು. ನಂತರ ಪ್ರೀತಿಯಿಂದ ನನಗೆ ಒಂದು ವೀಳ್ಯದೆಲೆಯನ್ನು ಕೊಟ್ಟರು. ಗುರುಮಹಾರಾಜರ ಶಿಷ್ಯರು ಈ ರೀತಿಯಲ್ಲಿ ತಮ್ಮ ಪ್ರೀತಿ ಪಾತ್ರರಿಗೆ ಆಶೀರ್ವಾದವನ್ನು ನೀಡುತ್ತಿದ್ದುದು ನೆನಪಿಗೆ ಬಂತು.

ಮುಂದಿನ ವರ್ಷ ಸ್ವಾಮಿ ವಿವೇಕಾನಂದರ ಜನ್ಮದಿನ ಬಂದಾಗ ಅದ್ವೈತ ಆಶ್ರಮದಲ್ಲಿ ಸಾರ್ವಜನಿಕ ಸಭೆಯೊಂದನ್ನು ಏರ್ಪಡಿಸಲಾಯಿತು. ಹಲವಾರು ಉಪನ್ಯಾಸಕರು ಇಂಗ್ಲಿಷ್, ಹಿಂದಿ ಮತ್ತು ಬಂಗಾಳಿಯಲ್ಲಿ ಮಾತನಾಡುವವರಿದ್ದರು ಮತ್ತು ಸ್ವಾಮಿ ಶಾರದಾನಂದರು ಅಧ್ಯಕ್ಷತೆ ವಹಿಸುವವರಿದ್ದರು. ನಾನು ಕಿರಣ್ ಬಾಬು ಅವರ ಮನೆಯಲ್ಲಿ ಕೆಲವು ಮನೆಗೆಲಸಗಳಲ್ಲಿ ನಿರತನಾಗಿದ್ದುದರಿಂದ ಸಭೆಗೆ ಹೋಗಲಿಲ್ಲ. ಇಂಗ್ಲಿಷ್ ಭಾಷಣಕಾರರು ಯಾವುದೋ ಅನಿವಾರ್ಯ ಕಾರಣದಿಂದ ಬಂದಿರಲಿಲ್ಲ. ಸಭಿಕರಲ್ಲಿ ಹಿಂದಿ ಅಥವಾ ಬಂಗಾಳಿ ಬಾರದ, ಇಂಗ್ಲಿಷ್ ಜನರಿರುವ ಕಾರಣ ನೀನು ಬಂದು ಇಂಗ್ಲಿಷ್‌ನಲ್ಲಿ ಮಾತನಾಡಬೇಕೆಂದು ಸ್ವಾಮಿ ಶಾರದಾನಂದರು ಹೇಳಿಕಳಿಸಿದ್ದಾರೆ ಎಂದು ಅವರ ಸೇವಕರು ತಿಳಿಸಿದರು. ಆಗ ನಾನು ಹಾಲು ಕುದಿಸುತ್ತಿದ್ದೆ. ಭಾಷಣಕ್ಕೆ ಸ್ವಲ್ಪವೂ ಸಿದ್ಧನಾಗಿರಲಿಲ್ಲ. ಸ್ವಾಮಿಗಳ ಆಜ್ಞೆಯಂತೆ ಇಂಗ್ಲಿಷ್‌ನಲ್ಲಿ ಮಾತನಾಡಲು ನನಗೆ ಅತ್ಯಂತ ಭಯವಾಗುತ್ತಿರುವುದಾಗಿ ಅವರಿಗೆ ತಿಳಿಸಿದೆ. ಆದರೆ ನಾನು ಮಾತನಾಡಲೇಬೇಕೆಂದು ಅವರು ಒತ್ತಾಯಿಸಿದರು. ಭಾರತದಲ್ಲಿ ಬ್ರಿಟಿಷರ ಆಡಳಿತದ ಕೊಡುಗೆಯಾದ ಯಾವ ಮೂರು ಕೆಡುಕುಗಳನ್ನು ಸ್ವಾಮಿ ವಿವೇಕಾನಂದರು ತೊಡೆದುಹಾಕಬೇಕೆಂದು ಹೇಳಿದ್ದರೋ ಅವುಗಳನ್ನು ತಿಳಿಸುವುದರೊಂದಿಗೆ ನನ್ನ ಭಾಷಣವನ್ನು ಪ್ರಾರಂಭಿಸಿದೆ. ಅವು ಯಾವುದೆಂದರೆ ಬೈಬಲ್, ಬಾಟಲ್ ಮತ್ತು ಬೆಟಾಲಿಯನ್ (ಸೇನೆ). ನನ್ನ ಈ ಟೀಕೆ ಸಭಿಕರಲ್ಲಷ್ಟೇ ಅಲ್ಲ ಇಡಿಯ ಪಟ್ಟಣದಲ್ಲಿಯೆ ಗುಲ್ಲೆಬ್ಬಿಸಿತು ಎಂದು ಅನಂತರ ನನಗೆ ತಿಳಿಯಿತು. ಸಹಜವಾಗಿ, ಸಭೆಯಲ್ಲಿ ಹಾಜರಿದ್ದ ಕೆಲವು ಇಂಗ್ಲಿಷ್ ಧರ್ಮ ಪ್ರಚಾರಕರು ಕುಪಿತರಾದರು. ಅದರಲ್ಲೂ ಬಾಟಲ್ ಮತ್ತು ಬೈಬಲ್ ಅನ್ನು ಒಂದೇ ತಕ್ಕಡಿಯಲ್ಲಿ ಇಟ್ಟಿದ್ದನ್ನು ಅವರು ವಿರೋಧಿಸಿದರು. ಅವರು ಅಲ್ಲಿನ ರಾಮಕೃಷ್ಣ ಸೇವಾಶ್ರಮದ ಮುಖ್ಯಸ್ಥರಿಗೆ ಕಟುವಾದ ಭಾಷೆಯ ಪತ್ರ ಬರೆದರು. ಆ ಪತ್ರವನ್ನು ಓದಿದ್ದ ಸ್ವಾಮಿ ಶಾರದಾನಂದರ ಕೋರಿಕೆಯನ್ನು

ಗೌರವಿಸಿ, ಆ ಧರ್ಮಪ್ರಚಾರಕರಿಗೆ ಪ್ರತ್ಯುತ್ತರ ಬರೆದು,ನಾನು ಯೇಸುಕ್ರಿಸ್ತನ ಬಗ್ಗೆ ನನಗಿರುವ ಅಪಾರ ಗೌರವದ ಬಗ್ಗೆ ತಿಳಿಸಿದೆ. ನಾನು ಮುಖತಃ ಅವರೊಂದಿಗೆ ವಿಷಯವನ್ನು ಚರ್ಚಿಸಬೇಕೆಂದಿರುವೆನೆಂದೂ ಹೇಳಿದೆ. ಆದರೆ ಅವರಿಗೆ ಅದ ರಿಂದ ಸಮಾಧಾನವಾಗಲಿಲ್ಲ. ನನ್ನೊಂದಿಗೆ ಭೇಟಿಯಾಗುವುದು ಸಂತೋಷಕರವಾದರೂ ವಿಷಯದ ಬಗ್ಗೆ ಯಾವುದೇ ಮಾತುಕತೆ ಪ್ರಾರಂಭವಾಗುವ ಮೊದಲು ನಾನು ಕ್ರಿಸ್ತನಲ್ಲಿ ಕ್ಷಮಾಯಾಚನೆ ಮಾಡಬೇಕು. ಏಕೆಂದರೆ ನಾನು ಬೈಬಲ್ ಅನ್ನು ಬಾಟಲಿನೊಂದಿಗೆ ಹೋಲಿಸಿ ಕ್ರಿಸ್ತನನ್ನು ಅಪಮಾನಗೊಳಿ ಸಿರುವೆನೆಂದು ಅವರು ಹೇಳಿದರು. ನಮ್ಮ ನಡುವೆ ಅನೇಕ ಪತ್ರವ್ಯವಹಾರ ನಡೆಯಿತು. ಇಷ್ಟಕ್ಕೂ ಅವರು ಅಂಧಾಭಿ ಮಾನಿಗಳಾದ ಕ್ರೈಸ್ತರು. ಆದುದರಿಂದ ನಾನು ಆ ವಿಷಯವನ್ನು ಸಂಪೂರ್ಣವಾಗಿ ಮರೆತುಬಿಡಬೇಕೆಂದು ನನಗೆ ಶಾರದಾ ನಂದರು ಹೇಳಿದರು. ಸ್ವಾಮಿ ಶಾರದಾನಂದರು ತಮ್ಮ ಕೆಲವೇ ಕ್ಷಣಗಳ ಅಧ್ಯಕ್ಷ ಭಾಷಣವನ್ನು ಕನಿಷ್ಠ ಪಕ್ಷ ಮೂರು ಸಲ ವಾದರೂ ನಿಲ್ಲಿಸಿದುದನ್ನು ಕಂಡೆ. ನಂತರ ಅದಕ್ಕೆ ಕಾರಣವನ್ನು ನಾನು ಕೇಳಿದಾಗ, ತಾನು ಮಾತನಾಡುತ್ತಿರುವಾಗ ಗುರು ಮಹಾರಾಜರೇ ಅಲ್ಲಿ ನಿಂತಿದ್ದುದನ್ನು ಸ್ಪಷ್ಟವಾಗಿ ಕಂಡು ತನ್ನ ಹೃದಯ ತುಂಬಿಬಂದು ಮೂಕರಾದರೆಂದು ಹೇಳಿದರು.

ಸ್ವಾಮಿ ಶಾರದಾನಂದರ ಅದ್ಭುತ ತಾಳ್ಮೆಯನ್ನು ಪರಿಚಯಿಸುವ ಘಟನೆಯೊಂದು ನನಗೆ ನೆನಪಾಗುತ್ತದೆ. ಪುರಿ ಮತ್ತು ಕೊಲ್ಕತಾದ 'ಉದ್ಬೋಧನ'ದಲ್ಲಿ ಬೆಳಗಿನ ಹೊತ್ತು ಧ್ಯಾನದಲ್ಲಿ ಅವರು ದೀರ್ಘ ಕಾಲವನ್ನು ಕಳೆಯುತ್ತಿದ್ದರು. ಆಗ ಅವರು ಒಂದು ವಿಗ್ರಹದಂತೆ ಕಾಣುತ್ತಿದ್ದರು. ಒಂದು ದಿನ ಬೆಳಗ್ಗೆ, ಬನಾರಸ್ ಸೇವಾಶ್ರಮದ ಮುಖ್ಯಸ್ಥರಾದ ಸ್ವಾಮಿ ಶುಭಾನಂದರು ನಾವು ಇಳಿದುಕೊಂಡಿದ್ದ ಮನೆಗೆ ಬಂದು, ಸೇವಾಶ್ರಮದ ಕಾರ್ಯದರ್ಶಿಗಳು ಸ್ವಾಮಿಗಳನ್ನು ನೋಡಲು ಬಹಳ ಕಾತರರಾಗಿದ್ದಾರೆ ಎಂದು ತಿಳಿಸಿದರು. ಆಗ ಸ್ವಾಮಿಗಳು ಧ್ಯಾನ ಮಾಡುತ್ತಿದ್ದರು. ಅವರ ಧ್ಯಾನಕ್ಕೆ ವಿಘ್ನ ತರುವುದು ಅನುಚಿತವೆಂದು ನಾನು ಹೇಳಿದೆ. ತುರ್ತು ವಿಷಯದ ಕುರಿತು ಮಾತನಾಡುವುದಿದೆಯೆಂದೂ ಕಾರ್ಯ ದರ್ಶಿಗಳು ಅನಾರೋಗ್ಯದಿಂದಿರುವ ಕಾರಣ ಅವರು ಇಲ್ಲಿಗೆ ಬರಲಾಗದೆಂದೂ, ಸುಮಾರು ಹತ್ತು ನಿಮಿಷಗಳ ನಡಿಗೆಯಷ್ಟು ದೂರವಿರುವ ಸೇವಾಶ್ರಮಕ್ಕೆ ಸ್ವಾಮಿಗಳೇ ಹೋಗಬೇಕಾಗು ವುದೆಂದೂ ಅವರು ಹೇಳಿದರು. ನನಗೆ ಏನು ಮಾಡಬೇಕೆಂದು ತೋಚಲಿಲ್ಲ. ನಾನು ಸ್ವಾಮಿಗಳ ಕೊಠಡಿಯ ಬಾಗಿಲಿನ ಬಳಿ ನಿಂತೆ. ಸನ್ಯಾಲ್ ಮಹಾಶಯ ತಮ್ಮ ಹಾಸಿಗೆಯ ಮೇಲೆ ಕುಳಿತು ಬಾಗಿಲಿನ ಮುಂದೆಯೇ ಧ್ಯಾನಸ್ಥರಾಗಿದ್ದರು. ಸ್ವಾಮಿ ಗಳು ಕೊಠಡಿಯ ಎಡಭಾಗದಲ್ಲಿ, ಗೋಡೆಯ ಬಳಿಯಿದ್ದ ತಮ್ಮ ಹಾಸಿಗೆಯ ಮೇಲೆ ಆಸೀನರಾಗಿದ್ದರು. ಕತ್ತನ್ನು ಒಳಚಾಚದೆ ಅವರನ್ನು ಬಾಗಿಲಿನಿಂದಲೇ, ನೋಡಲಾಗುತ್ತಿರಲಿಲ್ಲ. ನಾನು ಅಲ್ಲಿ ನಿಂತಿದ್ದಾಗ ಸನ್ಯಾಲ್ ಮಹಾಶಯರು ಕಣ್ಣು ತೆರೆದು, ಏನು ಬೇಕೆಂದು ಸಂಜ್ಞೆಯ ಮೂಲಕ ನನ್ನನ್ನು ಕೇಳಿದರು. ನಾನು ಸ್ವಾಮಿಗಳತ್ತ ನೋಡಿದೆ. ಅವರು ದುರುಗುಟ್ಟಿ ನೋಡಿ ಹೊರಟುಹೋಗಲು ಹೇಳಿದರು. ಆದರೆ ಸ್ವಾಮಿ ಶುಭಾನಂದರು ಕಾರ್ಯದರ್ಶಿಗಳನ್ನು, ಸ್ವಾಮಿಗಳು ನೋಡಲೇಬೇಕೆಂದು ಪುನಃ ಒತ್ತಾಯಿಸಿದರು. ಎರಡು-ಮೂರು ಸಾರಿ ಪ್ರಶ್ನಿಸಿದ ನಂತರ ನಾನು ಕೊಠಡಿಯ ಬಾಗಿಲಿನ ಬಳಿ ನಿಂತು ಸ್ವಾಮಿಗಳೊಂದಿಗೆ ಮಾತನಾಡಬೇಕೆಂದು ಹೇಳಿದೆ. ಸ್ವಾಮಿಗಳು ಕಣ್ಣನ್ನು ತೆರೆದು, ವಿಷಯವೇನೆಂದು ನನ್ನನ್ನು ಕೇಳಿದರು. ನಾನು ಕಾರ್ಯ ದರ್ಶಿಗಳ ಅಪೇಕ್ಷೆಯನ್ನು ಅವರಿಗೆ ತಿಳಿಸಿದೆ. ಅವರು, "ಹಾ, ಅವರು ನನ್ನನ್ನು ಹಾಯಾಗಿ ಧ್ಯಾನ ಮಾಡುವುದಕ್ಕೆ ಬಿಡು ವುದಿಲ್ಲ" ಎಂದರು. ಕಾರ್ಯದರ್ಶಿಗಳನ್ನು ಕರೆತರುವಂತೆ ನನಗೆ ಹೇಳಿದರು. ಅವರು ಅಸ್ವಸ್ಥರಾಗಿರುವರೆಂದೂ, ಸ್ವಾಮಿಗಳೇ ಸೇವಾಶ್ರಮಕ್ಕೆ ಹೋಗಬೇಕಾಗುವುದೆಂದೂ ನಾನು ಹೇಳಿದೆ. ಈಗಲೂ ನಾನು ಈ ಘಟನೆಯನ್ನು ನೆನಪಿಸಿಕೊಂಡಾಗ, ಸ್ವಾಮಿಗಳ ಧ್ಯಾನಕ್ಕೆ ಭಂಗ ತಂದ ನನ್ನ ಭಂಡ ಧೈರ್ಯದ ಕುರಿತು ಯೋಚಿಸಿದಾಗ, ನನ್ನ ಎದೆ ಡವಗುಟ್ಟುತ್ತದೆ.

ನಾನು ಸ್ವಭಾವತಃ ಚಟುವಟಿಕೆಯ ವ್ಯಕ್ತಿ. ಒಂದು ದಿನ ಸ್ವಾಮಿ ಶಾರದಾನಂದರು ನನಗೆ ಹೇಳಿದರು: "ಚಟುವಟಿಕೆ ಯಿಂದ ಕೂಡಿರುವುದು ಒಳ್ಳೆಯದು. ಆದರೆ ಅದು ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ. ನಿನ್ನ ಆರೋಗ್ಯ ಚೆನ್ನಾಗಿರ ಬೇಕು ಮತ್ತು ನಿನ್ನಲ್ಲಿ ಸಹೋದ್ಯೋಗಿಗಳೊಂದಿಗೆ ಹೊಂದಿ ಕೊಂಡು ಹೋಗುವ ಸಾಮರ್ಥ್ಯವಿರಬೇಕು. ಒಂದು ವೇಳೆ ಯಾವುದೋ ಕಾರಣದಿಂದ ನಿನಗೆ ಅಂಗವಿಕಲತೆಯಾದರೆ ಆಗ ಕೆಲಸ ಮಾಡಲು ಕಷ್ಟವಾಗುವುದು. ಆದುದರಿಂದ ಓದುವ ಅಭ್ಯಾಸವನ್ನಿಟ್ಟುಕೊ ಎಂದು ನಿನಗೆ ಹೇಳುತ್ತೇನೆ. ಅದೂ ಕೂಡ ಸಾಲದು. ನೀನು ಕುರುಡನಾದೆ ಎಂದಿಟ್ಟುಕೊ, ಆಗೇನು? ನೀನು ಧ್ಯಾನ ಮಾಡುವುದನ್ನೂ ಅಭ್ಯಸಿಸುವುದು ಒಳ್ಳೆಯದು. ನೀನು ಓದಲಾಗದಿದ್ದರೆ, ಕೆಲಸ ಮಾಡಲಾಗದಿದ್ದರೆ, ಕೊನೆಯ ಪಕ್ಷ ಧ್ಯಾನವನ್ನಾದರೂ ಮಾಡಬಹುದು."

ಕಿರಣ್ ಬಾಬು ತಮ್ಮ ಮನೆಯಲ್ಲಿ ಸ್ವಾಮಿ ಶಾರದಾನಂದರ ಸಮ್ಮುಖದಲ್ಲಿ 'ಲೀಲಾ ಪ್ರಸಂಗ'ವನ್ನು ಗಟ್ಟಿಯಾಗಿ ಓದುತ್ತಿದ್ದರು. ಸ್ವಾಮಿಗಳು ಆಗಾಗ ನಮ್ಮ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದರು.

ಇದು ನಿಜವಾಗಿಯೂ ಒಂದು ಮರೆಯಲಾಗದ ಅನುಭವ. ಸಾಯಂಕಾಲದ ಹೊತ್ತು ಸೇವಾಶ್ರಮದ ಮತ್ತು ಅದ್ವೈತ ಆಶ್ರಮದ ಸಾಧುಗಳು ಮತ್ತು ಬ್ರಹ್ಮಚಾರಿಗಳು ಸ್ವಾಮಿ ಶಾರದಾನಂದರ ದರ್ಶನ ಪಡೆಯಲು ಸಾಮಾನ್ಯವಾಗಿ ಕಿರಣ್ ಬಾಬು ಅವರ ಮನೆಗೆ ಬರುತ್ತಿದ್ದರು. ಬಹಳಷ್ಟು ಸಾರಿ ಅವರುಗಳು ಬಂದು ಸುಮ್ಮನೆ ಕುಳಿತುಕೊಳ್ಳುತ್ತಿದ್ದರು. ಒಂದು ದಿನ ಸ್ವಾಮಿಗಳು "ನೀವು ಯಾವುದಾದರೂ ಪ್ರಶ್ನೆಯನ್ನೇಕೆ ಕೇಳಬಾರದು?" ಎಂದರು. ಆದರೂ ಅವರೆಲ್ಲ ಸುಮ್ಮನೆ ಕುಳಿತಿದ್ದರು. ನಂತರ ಅವರೇ ಯಾರಿಗೋ ಹೇಳಿದರು: "ನಿಖಿಲಾನಂದನನ್ನು ಬರಹೇಳು. ಅವನಾದರೂ ಕೆಲವು ಪ್ರಶ್ನೆಗಳನ್ನು ಕೇಳಬಹುದು". ಒಂದು ದಿನ ನಾನು ಹೇಳಿದ್ದು ಈಗಲೂ ನನಗೆ ನೆನಪಿದೆ: "ನಮಗೆ ಗುರುಮಹಾರಾಜರ ಆಶೀರ್ವಾದ ಇದೆ. ಇಲ್ಲದಿದ್ದರೆ ನಮಗೆ ಸಂನ್ಯಾಸ ಜೀವನವನ್ನು ತೆಗೆದುಕೊಳ್ಳಲಾಗುತ್ತಿರಲಿಲ್ಲ. ನಮಗೆ ನಿಮ್ಮ ಆಶೀರ್ವಾದವೂ ಇದೆ. ಆದರೆ, ನನ್ನ ಬಗ್ಗೆ ಹೇಳಿಕೊಳ್ಳುವುದಾದರೆ, ನನಗೆ ಯಾವ ಆಧ್ಯಾತ್ಮಿಕ ಅನುಭವವೂ ಆಗಿಲ್ಲ." ಸ್ವಾಮಿಗಳು ಹೇಳಿದರು: "ನೀನು ಗುರುಮಹಾರಾಜರ ಆಶೀರ್ವಾದದ ಪರಿಣಾಮವನ್ನು ಅವಸಾನ ಕಾಲದಲ್ಲಿ, ಅದಕ್ಕೆ ಮುಂಚೆ ಅಲ್ಲದಿದ್ದರೂ, ನೋಡುವೆ. ಆದರೆ ಫಲಿತಾಂಶವನ್ನು ಈಗಲೇ ನೋಡಬೇಕೆಂದಿದ್ದರೆ, ನೀನು ಕಷ್ಟಪಡಬೇಕು."

ಬನಾರಸಿನಲ್ಲಿ ನಡೆದ ಎರಡು ಘಟನೆಗಳು ನನಗೆ ಇಲ್ಲಿ ನೆನಪಿಗೆ ಬರುತ್ತವೆ. ಒಂದು ಮಧ್ಯಾಹ್ನ ಸ್ವಾಮಿಗಳ ತಂಡದೊಂದಿಗೆ ಬಂದಿದ್ದ ಮಹಿಳೆಯರು ದೇವಸ್ಥಾನಗಳನ್ನು ನೋಡಲು ಹೋದರು. ಅವರು ಹಿಂತಿರುಗುವುದಕ್ಕೆ ತಡವಾಯಿತು. ಮಳೆಯೂ ಹನಿಯಲು ಪ್ರಾರಂಭವಾಯಿತು. ಅವರು ಬಟ್ಟೆಗಳನ್ನು ಮಾಡಿನ ಮೇಲೆ ಒಣಗಹಾಕಿದ್ದರು. ನಮ್ಮ ನಾಯಕರಾದ ಸ್ವಾಮಿ ಸಂವಿದಾನಂದರು ಆ ಬಟ್ಟೆಗಳನ್ನು ತಂದು ಮಹಿಳೆಯರ ಕೋಣೆಯಲ್ಲಿಡುವಂತೆ ನನಗೆ ಹೇಳಿದರು. ಈ ಕೆಲಸವನ್ನು ಮಾಡಲು ನನಗೆ ಮನಸ್ಸಾಗಲಿಲ್ಲ. ಸ್ವಾಮಿಗಳೊಂದಿಗೆ ದೀರ್ಘ ಕಾಲ ಒಟ್ಟಿಗೆ ಇದ್ದುದಾಗಿಯೂ ಸ್ವಾಮಿಗಳ ಆಲೋಚನೆಯ ರೀತಿ ತಮಗೆ ತಿಳಿದಿರುವುದಾಗಿಯೂ ಅವರು ಹೇಳಿದರು. ಭಕ್ತರ ಬಟ್ಟೆಗಳು ಒದ್ದೆಯಾದರೆ ಸ್ವಾಮಿಗಳಿಗೆ ಕೋಪ ಬರುವುದೆಂದರು. ಸ್ವಾಮಿ ಸಂವಿದಾನಂದರಿಗೆ ಒಂದು ಕಾಲಿನಲ್ಲಿ ನೋವಿತ್ತು. ಇಲ್ಲದಿದ್ದರೆ ತಾವೇ ಆ ಕೆಲಸವನ್ನು ಮಾಡುತ್ತಿದ್ದುದಾಗಿಯೂ ಹೇಳಿದರು. ಮನಸ್ಸಿಲ್ಲದೆ ಮಹಡಿಗೆ ಹೋಗಿ, ಬಟ್ಟೆಗಳನ್ನು ತೆಗೆದುಕೊಂಡು, ಮಹಿಳೆಯರ ಕೊಠಡಿಯಲ್ಲಿ ಇಟ್ಟೆ. ಅಂಗಳದಲ್ಲಿ ಕುಳಿತಿದ್ದ ಸ್ವಾಮಿ ಶಾರದಾನಂದರು ನಡೆದುದೆಲ್ಲವನ್ನೂ ನೋಡಿದರು. ಬಟ್ಟೆಗಳನ್ನು ನಾನು ಏಕೆ ಕೆಳಗೆ ತಂದೆನೆಂದು ಕೋಪದಿಂದ ನನ್ನನ್ನು ಕೇಳಿದರು. ಮಳೆ ಹನಿಯುತ್ತಿರುವ ಕಾರಣವನ್ನು ನಾನು ನೀಡಿದಾಗ, ನನಗೆ ಆ ಕೆಲಸವನ್ನು ಮಾಡಲು ಯಾರು ಹೇಳಿದರೆಂದು ಅವರು ತಿಳಿಯಲಿಚ್ಛಿಸಿದರು. ಸೋದರ ಸಂನ್ಯಾಸಿಯ ವಿರುದ್ಧ ದೂರುವುದು ಬೇಡವೆಂದು ನಾನು ಏನೂ ಹೇಳದೆ ಸುಮ್ಮನಿದ್ದೆ. ಆ ಬೈಗಳು ಅನವಶ್ಯಕವೆಂದು ನಾನು ತಿಳಿದಿದ್ದೆನಾದ್ದರಿಂದ ನನ್ನ ಮನಸ್ಸಿಗೆ ನೋವು ಆಯಿತು.

ಈ ಹಿಂದೆ ಮಾಡಿದಂತೆ, ನನ್ನ ಕೋಣೆಗೆ ಹೋಗಿ ಬಾಗಿಲನ್ನು ಹಾಕಿಕೊಂಡು ಧ್ಯಾನಿಸುತ್ತಿರುವವನಂತೆ ಕುಳಿತೆ. ಸ್ವಾಮಿಗಳು ಮತ್ತೆ ನನ್ನ ಕೋಣೆಯ ಬಾಗಿಲನ್ನು ತೆರೆದು ತಮ್ಮ ಮಧುರ ಧ್ವನಿಯಲ್ಲಿ ಕಾಫಿ ಮಾಡಿಕೊಡುವಂತೆ ಕೇಳಿದರು. ನನಗೆ ಸಂಬಂಧಿಸದ ವ್ಯವಹಾರಗಳಿಗೆ ತಲೆಹಾಕಬಾರದೆಂಬ ಪಾಠವನ್ನು ನಾನಂದು ಕಲಿತೆ. ನಾನೀಗ ಮತ್ತೊಂದು ಘಟನೆಯನ್ನು ವಿವರಿಸುವೆನು. ಅದು, ಜ್ಞಾನಿಗಳ ಯೋಚನಾಲಹರಿಯನ್ನು ಅರ್ಥ ಮಾಡಿಕೊಳ್ಳುವುದು ಎಷ್ಟು ಕಷ್ಟವೆಂಬುದನ್ನು ತೋರಿಸುವುದು.

ಬನಾರಸ್‌ನಲ್ಲಿ ಒಮ್ಮೆ ಸ್ವಾಮಿ ಶಾರದಾನಂದರ ಆರೋಗ್ಯ ಚೆನ್ನಾಗಿರಲಿಲ್ಲ. ನಾವು 'ಉದ್ಬೋಧನ' ಕ್ಕೆ ಹಿಂತಿರುಗಿದಾಗ ಅವರು ಜ್ವರ ಬಂದು ಮಲಗಿದ್ದರು. ಚಿಕಿತ್ಸೆ ಮಾಡುತ್ತಿದ್ದ ಡಾ. ದುರ್ಗಾಪ್ರಸಾದ್ ಘೋಷರಿಗೆ ನಾನು ಸ್ವಾಮಿಗಳ ದೇಹಸ್ಥಿತಿಯ ಬಗ್ಗೆ ವರದಿ ಮಾಡಬೇಕಾಗಿತ್ತು. ಒಂದು ದಿನ ಬೆಳಗ್ಗೆ ಸುಮಾರು ಹನ್ನೊಂದು ಘಂಟೆಯ ಹೊತ್ತಿಗೆ ಡಾ. ಘೋಷ್ 'ಉದ್ಬೋಧನ'ಕ್ಕೆ ಬಂದು ಎರಡು ಔಷಧಿಗಳನ್ನು ಕೊಟ್ಟರು. ಜ್ವರ ಏರಿದಂತೆ ಅಥವಾ ಇಳಿದಂತೆ ಸ್ವಾಮಿಗಳಿಗೆ ಅದನ್ನು ಕೊಡಬೇಕಾಗಿತ್ತು. ಡಾಕ್ಟರ್ ಮನೆಗೆ ಹಿಂತಿರುಗಿದರು. ನಾನು ಸ್ವಾಮಿಗಳ ಜ್ವರವನ್ನು ಪರೀಕ್ಷಿಸಿದೆ. ಆಗ ಅದು ಬಹಳ ಏರಿತ್ತು. ಏನು ಮಾಡಬೇಕೆಂದು ತೋಚದೆ ನಾನು ಡಾ. ಘೋಷರ ಮನೆಯತ್ತ ಧಾವಿಸಿದೆ. ಸನ್ಯಾಲ್ ಮಹಾಶಯರು, ನಾನು ಅವರ ಮನೆಯ ಮುಂದೆ ಹಾದುಹೋಗುತ್ತಿರುವುದನ್ನು ಕಂಡು ಸ್ವಾಮಿಗಳ ದೇಹಸ್ಥಿತಿಯ ಬಗ್ಗೆ ವಿಚಾರಿಸಿದರು. ಸ್ವಾಮಿಗಳಿಗೆ ಜ್ವರ ಹೆಚ್ಚಾಗಿರುವುದೆಂದು ನಾನು ಅವರಿಗೆ ತಿಳಿಸಿದೆ. ನಾನು ಡಾ. ಘೋಷರ ಮನೆಯನ್ನು ತಲುಪಿದಾಗ ಅವರು ಸಂಜೆಯ ಊಟ ಮುಗಿಸಿ ವಿಶ್ರಮಿಸುತ್ತಿದ್ದರು. ನನಗೂ ಸ್ವಲ್ಪ ವಿಶ್ರಾಂತಿ ಪಡೆಯುವಂತೆ ಹೇಳಿ, ನಂತರ ನಾವಿಬ್ಬರೂ ಒಟ್ಟಿಗೆ 'ಉದ್ಬೋಧನ'ಕ್ಕೆ ಹೋಗೋಣವೆಂದರು. ತಮ್ಮ ವಿಶ್ರಾಂತಿಗೆ ಭಂಗ ಮಾಡಿಕೊಳ್ಳದೆ ಕೇವಲ ಔಷಧಿಯನ್ನು

ಸೂಚಿಸಿದರೆ ಸಾಕೆಂದು ನಾನು ಬೇಡಿಕೊಂಡೆ. ಆದರೆ ಸ್ವಾಮಿಗಳನ್ನು ಕಾಣುವ ಕಾತುರ ಅವರಿಗೆ. ನಾವು ಮನೆಗೆ ಬಂದಾಗ ಸ್ವಾಮಿಗಳೊಬ್ಬರು ನನ್ನನ್ನು ಸ್ವಾಮಿ ಶಾರದಾನಂದರ ಕೊಠಡಿಗೆ ಹೋಗಬೇಡವೆಂದರು. ಕಾರಣ, ಡಾ. ಘೋಷರಿಗೆ ವಿಶ್ರಾಂತಿಗೆ ನಾನು ಅಡ್ಡಿಯುಂಟುಮಾಡಿದ್ದರಿಂದ ಸ್ವಾಮಿಗಳು ನನ್ನ ಮೇಲೆ ಕೋಪಗೊಂಡಿದ್ದರು. ನಾನು ಡಾ. ಘೋಷರ ಮನೆಗೆ ಹೋಗಿದ್ದುದನ್ನು ಸನ್ಯಾಲ್ ಮಹಾಶಯರು ಆಗಲೆ ಸ್ವಾಮಿಗಳಿಗೆ ವರದಿ ಮಾಡಿದ್ದರು! ಆದರೂ ನಾನು ಡಾ. ಘೋಷ್‌ರೊಂದಿಗೆ ಸ್ವಾಮಿಗಳ ಕೊಠಡಿಗೆ ಹೋದೆ. ನನ್ನನ್ನು ನೋಡಿದ ಕೂಡಲೆ ರೇಗುವ ದನಿಯಲ್ಲಿ ತಮ್ಮ ಜ್ವರದ ಬಗ್ಗೆ ತೋರಿದ ಅನವಶ್ಯಕ ಕಾಳಜಿಗಾಗಿ ನನ್ನನ್ನು ಕಠೋರವಾಗಿ ಬೈದರು. ಮತ್ತೊಮ್ಮೆ ನಾನು ಹೀಗೆ ಮೂರ್ಖನಂತೆ ವರ್ತಿಸಿದರೆ ಅವರು ನನ್ನನ್ನು ಎಂದಿಗೂ ತಮ್ಮ ಹತ್ತಿರ ಇರುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರು.

ಆಗಾಗ್ಗೆ ನಾನು ಹೀಗೆ ಸ್ವಾಮಿಗಳಿಂದ ಬೈಸಿಕೊಳ್ಳುತ್ತಿದ್ದೆ. ಆಗ ಅದು, ಅನೇಕ ವೇಳೆ, ವಿನಾ ಕಾರಣವೆಂದು ಯೋಚಿಸುತ್ತಿದ್ದೆ, ಅದನ್ನು ಮಾನಸಿಕವಾಗಿ ವಿರೋಧಿಸುತ್ತಲೂ ಇದ್ದೆ. ಆದರೆ, ನಲವತ್ತು ವರ್ಷಗಳ ನಂತರ ಅವುಗಳಲ್ಲಿ ಕೆಲವನ್ನು ಜ್ಞಾಪಿಸಿಕೊಂಡಾಗ, ಅವು ನಿಜವಾಗಿ ಗುಪ್ತ ಆಶೀರ್ವಾದಗಳು ಎಂದು ನನಗೆ ಮನವರಿಕೆಯಾಗುತ್ತಿದೆ. ನನಗೆ ಇನ್ನೂ ಹೆಚ್ಚು ಹೆಚ್ಚಾಗಿ ಹಾಗೆ ಆಗಬೇಕಾಗಿತ್ತೆಂದು ಈಗ ಅನ್ನಿಸುವುದು. ಬಹುಶಃ ಸ್ವಾಮಿಗಳು ನನ್ನ ಅಹಂಕಾರವನ್ನು ಮುರಿಯಲು ಬಳಸಿದ ಮಾರ್ಗ ಅದಾಗಿರಬಹುದು.

(ಮುಂದುವರಿಯುವುದು)

## ಮನನ–ಮಾನ್ಯ

### ವಿಚಿತ್ರ ಮಾನವ ಸ್ವಭಾವ

–ಮಧುಪ

ಮೂರು ಬಗೆಯ ಜನರಿರುತ್ತಾರೆ. ಸತ್ಯಂ ವದ ಧರ್ಮಂ ಚರ ಎಂದು ಪ್ರಮಾಣ ವಚನ ಮಾಡಿದವರು, ನ್ಯಾಯ–ಧರ್ಮ ಎಂಬ ತತ್ತ್ವಗಳನ್ನು ಎಂದೂ ಕೈಬಿಡದವರು ಒಂದು ಬಗೆ. ಈ ನೀತಿ ನಿಯಮಗಳು ಎಲ್ಲರಿಗೂ (ತಮ್ಮನ್ನೂ ಸೇರಿಸಿಕೊಂಡು) ಅನ್ವಯವಾಗುವುದೆಂದು ಹೇಳುವ ಖಂಡಿತವಾದಿಗಳು. ಅವರು ನ್ಯಾಯ ನಿಷ್ಠುರರು, ದಾಕ್ಷಿಣ್ಯಪರರಲ್ಲ. ಯಾವ ಕೆಲಸ ಮಾಡಲಿ, ಯಾವ ಮಾತು ಆಡಲಿ, ಯಾವ ಆಲೋಚನೆಯೇ ಬರಲಿ, ಇದು ಸರಿಯೇ, ನ್ಯಾಯವೇ, ಧರ್ಮಯುಕ್ತವೇ ಎಂದು ಮೊದಲೇ ಪರಿಶೀಲನೆ ಮಾಡುವರು. ತಮಗೆ ಅದರಿಂದ ಕಷ್ಟವಾಗಲಿ, ನಷ್ಟವಾಗಲಿ– ನ್ಯಾಯವೆಂದು ತಮಗೆ ಖಚಿತವಾದ ತತ್ತ್ವಗಳಿಗೆ ತಲೆಬಾಗುವರು.

ಎರಡನೆಯ ಬಗೆ ಇನ್ನೊಂದು ತುದಿ. ಅವರಿಗೆ ಯಾವ ನೀತಿ ತತ್ತ್ವಗಳೂ ಬೇಡ. ತಮಗೆ ಅನುಕೂಲವಾದದ್ದು, ಲಾಭಕರವಾದದ್ದು ಆದರೆ ಆಯಿತು. ಅದೇ ಅವರ ಗುರಿ. ಗುರಿಸಾಧನೆಗೆ ಮಾರ್ಗ ಯಾವುದಾದರೂ ಸರಿ. ವಕ್ರವೊ, ಕುಟಿಲವೊ– ಒಟ್ಟಿನಲ್ಲಿ ಕಾರ್ಯಸಾಧನೆ ಆಗಲೇಬೇಕು. ತಾವು ತತ್ತ್ವನಿಷ್ಠರೆಂದು ಸೋಗೂ ಹಾಕುವುದಿಲ್ಲ, ಅವರು. ಸರಿಯೊ ತಪ್ಪೊ, ನ್ಯಾಯವೊ ಅನ್ಯಾಯವೊ, ನಿಯಮಕ್ಕನುಗುಣವೊ ವಿರೋಧವೊ– ಅದೊಂದೂ ನಮಗೆ ಗೊತ್ತಿಲ್ಲ. ಗೊತ್ತಾಗುವುದೂ ಬೇಡ. ಅದನ್ನೆಲ್ಲ ಕಟ್ಟಿಕೊಂಡು ನಮಗೇನಾಗಬೇಕು. ನೋಡಿ ಇದು ನಮ್ಮ ಇಷ್ಟ, ಇದು ಈಡೇರಬೇಕು.

ಇನ್ನು ಮೂರನೇ ಬಗೆಯ ಜನ ತಾವು ತುಂಬಾ ಬುದ್ಧಿವಂತರು, ಜಾಣರು, ಎಂದುಕೊಂಡು ಹಾಗೆಯೇ ಮಾತಾಡುತ್ತಾರೆ– ದೊಡ್ಡ ದೊಡ್ಡ ತತ್ತ್ವಗಳನ್ನು ಹೇಳುತ್ತಾರೆ. ಆದರೆ ಅವರದು ಯಾವಾಗಲೂ ಎರಡು ಮಾನದಂಡ, ದ್ವಿಮುಖ ನೀತಿ. ತಮಗೇ ಒಂದು, ಇತರರಿಗೆ ಇನ್ನೊಂದು. ಸಮಯ ನೋಡಿ ತಕ್ಕುದನ್ನು ಅನ್ವಯಿಸುತ್ತಾರೆ. ತಮಗೆ ಅನುಕೂಲವಾದುದು, ಲಾಭಕರವಾದುದು ಯಾವುದೋ ಅದನ್ನೇ ತಾತ್ತ್ವಿಕವಾಗಿ ಸಮರ್ಥನೆ ಮಾಡುತ್ತಾರೆ. ತಾವೆಂದೂ ನ್ಯಾಯ–ನೀತಿ ಬಿಟ್ಟು ಕದಲುವವರಲ್ಲ ಎಂದು ಸತ್ಯದ ತಲೆ ಮೇಲೆ ಹೊಡೆದ ಹಾಗೆ ಹೇಳುತ್ತಾರೆ.

ರೈಲಿನಲ್ಲಿ ತುಂಬಾ ಜನರಿದ್ದು ಗಾಡಿಯ ಒಳಗಿರುವ ಜನ ಬಾಗಿಲನ್ನು ಒಳಗಿಂದ ಭದ್ರಪಡಿಸಿ, ಯಾರು ಹತ್ತಲಿಕ್ಕೂ ಬಿಡದೆ ಹಟಹಿಡಿದಾಗ, ಈ ಜನ ಹತ್ತುವ ಪ್ರಯತ್ನದಲ್ಲಿರುವವರು. ಆಗ ಅವರು ಬೋಧಿಸುವ ಧರ್ಮ ಶ್ರೇಷ್ಠ ಮಾನವೀಯ ಮೌಲ್ಯಗಳಿಂದ ತುಂಬಿರುತ್ತದೆ. ಅದು ಹೇಗೊ ಅಂತು ಅವರು ಬಾಗಿಲು ತೆರೆಸಿ ಒಳಗೆ ಸೇರಿಕೊಂಡರು ಅನ್ನಿ. ಅಲ್ಲಿಂದ ಮುಂದಿನ ಸ್ಟೇಷನ್ನುಗಳಲ್ಲಿ ಗಾಡಿಯನ್ನು ಹತ್ತಲು ಯತ್ನಿಸುವ ಜನರು ಎಷ್ಟು ಗೋಗರೆಯಲಿ, ಕಾಡಲಿ, ಬೇಡಲಿ, ಇವರು ಆಗಲೆ ತಮ್ಮ ಸ್ಥಳಗಳನ್ನು ಚಾಕಚಕ್ಯತೆಯಿಂದ ಭದ್ರಪಡಿಸಿಕೊಂಡವರು, ಜಪ್ಪಯ್ಯಾ ಅಂದರೂ ಬಾಗಿಲು ತೆರೆಯುವುದಿಲ್ಲ. ಆಗ ಅವರ ಬಾಯಿಂದ ಬರುವ ಆಣಿಮುತ್ತುಗಳೇ ಬೇರೆ. ಮುಂದಿನ ಸ್ಟೇಷನ್ ಇನ್ನೇನು ಸಮೀಪಿಸುತ್ತಿದೆ ಎಂದಾಗಲೇ ಇವರು ಮುನ್ನೆಚ್ಚರಿಕೆ ವಹಿಸಿ ಬಾಗಿಲಿನ ಒಳಬಿರಡೆ ಬಿಗಿಯುತ್ತಾರೆ. ಸ್ಟೇಷನ್ ಕಡೆಯ ಕಿಟಕಿಗಳನ್ನೆಲ್ಲ ಮುಚ್ಚಿಸುತ್ತಾರೆ. ತಮ್ಮ ಈ ರೀತಿಗಳನ್ನೆಲ್ಲ ನ್ಯಾಯವಾದುದು ಎಂಬುದನ್ನು ಸಮರ್ಥಿಸಿ, ವಾದಿಸಿ ಸಾಧಿಸುತ್ತಾರೆ.